

# ಮುಂಗಾರಿಗೆ ಮುನ್ನುಡಿ

ನಮ್ಮ ಮನೆಯ ಅಂಗಳದಲ್ಲಿ ಅರಳಿರುವ ಅಪರೂಪದ ಸೀತಾಳೆ ಹೂಗಳು. ಸುಮಾರು 50 ಹೂಗಳು ಮುಂಗಾರಿಗೆ ಚಪ್ಪರ ಹಾಸಿ ಸ್ವಾಗತ ಕೋರುವಂತಿವೆ. ಮಲೆನಾಡಿನಲ್ಲಿ ಕಾಣಸಿಗುವ ಈ ಅಪರೂಪದ ಆರ್ಕಿಡ್ ಜನ ಬಳಕೆಯಲ್ಲಿ ಸೀತಾಳೆ ಹೂ, ಸೀತಾಳೆ ಗಡ್ಡೆ, ಸೀತಾಳೆ ದಂಡೆ ಎಂಬೆಲ್ಲ ಹೆಸರಿನಿಂದ ಚಿರಪರಿಚಿತ. ಮಳೆಗಾಲದ ಮುನ್ಸೂಚನೆ ಎಂಬಂತೆ ಈ ಹೂವು ಮುಂಗಾರಿನ ಆರಂಭದಲ್ಲಿ ಮಾತ್ರ ಅರಳುತ್ತದೆ.

**ಚಿತ್ರ- ಬರಹ: ಅಂಜನ್ ಕಾಯ್ಕಿಣಿ, ಸಾಗರ**



# ಹೇಗಿದೆ ನೋಡಿ ರೇಡಿಯೋ!

ಗಾತ್ರ ಹಾಗೂ ಆಕಾರಗಳ ದೃಷ್ಟಿಯಿಂದ ಮೇಲ್ನೋಟಕ್ಕೆ ವಾಷಿಂಗ್ ಮೆಷಿನ್‌ನಂತೆ ಕಾಣುವ ಚಿತ್ರದಲ್ಲಿರುವ ರೇಡಿಯೋ ನೋಡುತ್ತಿದ್ದರೆ ಯಾರೂ ಇದನ್ನು ರೇಡಿಯೋ ಎಂದು ಒಪ್ಪಿಕೊಳ್ಳಲಾರರು. ನಾಲ್ಕೂವರೆ ಅಡಿ ಎತ್ತರ ಮತ್ತು ಮೂರು ಅಡಿ ಅಗಲದ ಈ ಮರ್ಫಿ ಕಂಪೆನಿಯ ಬೃಹತ್ ರೇಡಿಯೋದಲ್ಲಿ ಒಂದು ಭಾಗದಲ್ಲಿ ಗ್ರಾಮಾಫೋನ್ ಇದೆ. ಎಡ ಹಾಗೂ ಬಲ ಪಾರ್ಶ್ವಗಳಲ್ಲಿ ರೆಕಾರ್ಡಿಂಗ್ ಪ್ಲೇಟ್‌ಗಳನ್ನಿರಿಸಲು ಸ್ಥಳಾವಕಾಶವಿದೆ. ಸುತ್ತೂರು ಮಠದ 23 ನೆಯ ಜಗದ್ಗುರುಗಳಾಗಿದ್ದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಉಪಯೋಗಿಸುತ್ತಿದ್ದರಂತೆ. ಇದನ್ನು ಸುತ್ತೂರು ವಸ್ತು ಸಂಗ್ರಹಾಲಯದಲ್ಲಿ ನೋಡಬಹುದು.

**-ಮ.ಗು.ಬಸವಣ್ಣ, ನಂಜನಗೂಡು**

# ಕಲ್ಲೊಂದು ಕುಂಡವಾದಾಗ...

ಬೆಂಗಳೂರಿನ ಸೌತ್ ಎಂಡ್ ಸರ್ಕಲಿನ ಮನೆಯೊಂದರ ಮುಂದೆ ಹೆಜ್ಜೆ ಹಾಕುತ್ತಿದ್ದಾಗ ಈ ಕಲ್ಲು ಕುಂಡ ನನ್ನ ಗಮನ ಸೆಳೆಯಿತು. ಕಾಂಪೌಂಡಿನ ಹೊರಗೆ ಕಲ್ಲು, ಹೂ ಬಿಡುವ ಕ್ಯಾಕ್ಟಸ್, ಅಲಂಕಾರಿಕ ಸಸ್ಯ, ಒಂದೆಲಗ ಹೀಗೆ ಹಲವು ಬಗೆಯ ಸಸ್ಯ ಪ್ರಭೇದಗಳನ್ನು ತನ್ನೊಳಗೆ ಮೈಗೂಡಿಸಿಕೊಂಡಿದೆ ಈ ಕುಂಡ. ಪ್ರಾಕೃತಿಕವಾಗಿ ಕಾಣುವ ಇದು ಮನೆಯ ಸೊಬಗನ್ನು ಹೆಚ್ಚಿಸುವುದರ ಜೊತೆಗೆ ಅವರ ಸೌಂದರ್ಯಪ್ರಜ್ಞೆಯನ್ನು ಸಾರುತ್ತಿದೆ.

**-ಧರ್ಮಾನಂದ ನಾಯಕ್ ಶಿರ್ವ, ಬೆಂಗಳೂರು**

